**ದಿನಾಂಕಃ 18-03-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಖ್ಯ ವಿಚಾರಣೆಃ 9 ನೇ ಪ್ರತಿವಾದಿ ಪರ ಶ್ರೀ ಎನ್.ವಿ.ಸಿ. ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಹೇಳಿ ಬರೆಸಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎನ್.ಕೆ.ಕೆ. ವಕೀಲರಿಂದ**

ಈ ಪ್ರಕರಣದ ಪ್ರತಿ ಮುದ್ದತ್ತಿಗೂ ನಾನು ನ್ಯಾಯಾಲಯಕ್ಕೆ ಹಾಜರು ಆಗಿರುತ್ತೇನೆ. ನ್ಯಾಯಾಲಯದಿಂದ ಕಮೀಶನರ ನೇಮಕ ಮಾಡಲು ಅರ್ಜಿದಾರರು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಗೆ ನಾನು ತಕರಾರು ಹಾಕಿದ್ದೆ. ಜಮೀನನ್ನು ಅಳತೆ ಮಾಡಿ ವರದಿ ಸಲ್ಲಿಸುವ ಸಲುವಾಗಿ ಈ ನ್ಯಾಯಾಲಯವು ಕಮೀಶನರವರನ್ನು ನೇಮಕ ಮಾಡಿ ಆದೇಶ ಮಾಡಿತ್ತು ಎಂದರೆ ಸರಿ. ಆದೇಶದಂತೆ ಕಮೀಶನರವರು ದಾವಾ ಆಸ್ತಿಗಳನ್ನು ಅಳತೆ ಮಾಡಲು ಬಂದಾಗ, ಅರ್ಜಿದಾರರು ಮತ್ತು ಎಲ್ಲ ಎದುರುದಾರರು ಹಾಜರಿದ್ದೇವು, ಆದರೆ ನಾನು ಕಮೀಶನರವರಿಗೆ ಗಲಾಟೆ ಮಾಡಿದೆ ಎಂದರೆ ಸಾಕ್ಷಿ ನಾನು ಯಾವುದೇ ಗಲಾಟೆ ಮಾಡಿಲ್ಲ, ಕಮೀಶನರವರು ಅಳತೆ ಮಾಡಿಕೊಂಡು ಹೋಗಿರುತ್ತಾರೆ ಅಂತಾ ನುಡಿಯುತ್ತಾರೆ. ಕಮೀಶನರ ಹಾಕಿದ ವರದಿಯ ಪ್ರಕಾರ ಹೆಣ್ಣುಮಕ್ಕಳಿಗೆ ದಾವಾದಾಸ್ತಿಗಳಲ್ಲಿ ಹಿಸ್ಸೆ ಹೋಗುತ್ತದೆ ಎಂದರೆ ಸಾಕ್ಷಿ ಹೌದು, ಅದರೆ ಅವರು ನಮಗೆ ಸಂಬಂಧ ಇಲ್ಲ, ಹೀಗಾಗಿ ಆಸ್ತಿ ಕೊಡಲು ಬರುವುದಿಲ್ಲ ಅಂತಾ ನುಡಿಯುತ್ತಾರೆ.

2. ಹೇಮಪ್ಪ ತೀರಿಕೊಂಡಿದ್ದು, ಅವನಿಗೆ ಯಾರೂ ವಾರಸುದಾರರು ಇರುವುದಿಲ್ಲ ಎಂದರೆ ಸರಿ. ಹೇಮಪ್ಪನ ಹಿಸ್ಸೆ ಎಲ್ಲರಿಗೂ ಬರುತ್ತದೆ ಎಂದರೆ ಸಾಕ್ಷಿ

ನನಗೊಬ್ಬನಿಗೆ ಬರಬೇಕು ಅಂತಾ ನುಡಿಯುತ್ತಾರೆ. ಹೇಮಪ್ಪ ಯಾವುದೇ ವಿಲ್ ವಗೈರೆ ಮಾಡಿಸಿಲ್ಲ ಎಂದರೆ ಸರಿ. ಕಾನೂನಿನ ಪ್ರಕಾರ ಹೇಮಪ್ಪನ ಆಸ್ತಿ ಎಲ್ಲರಿಗೂ ಸಹಾ ಬರುತ್ತದೆ ಎಂದರೆ ಸರಿಯಲ್ಲ. ಕಮೀಶನರ್ ವರದಿಯ ಪ್ರಕಾರ ಎಲ್ಲರಿಗೂ ಆಸ್ತಿ ಬಿಟ್ಟು ಕೊಡಬಾರದು ಅಂತಾ ನನ್ನ ಮನಸ್ಸಿನಲ್ಲಿದೆ ಎಂದರೆ ಸರಿ. ಈ ಕಾರಣದಿಂದ ಕಮೀಶನರ ಅಳತೆ ಮಾಡಿಕೊಂಡು ಹೋದರೂ ಸಹಾ ನಾನು ಸ್ಥಳಕ್ಕೆ ಕಮೀನಶರ ಭೇಟಿ ನೀಡಿಲ್ಲ ಅಂತಾ ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಜಿಲ್ಲಾ ನ್ಯಾಯಾಲಯದಲ್ಲಿ ನಾನು ಅಪೀಲು ಮಾಡಿದ್ದೇನೆ. ಎಂ.ಎ. ನಂಬರ 14/2020 ನೇದ್ದು ಮಾನ್ಯ 2 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಲಯ, ರಾಣೆಬೆನ್ನೂರಿನ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದ್ದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ. ಓ ಎಸ ನಂಬರ 122/2014 ರ ತೀರ್ಪಿನ ವಿರುದ್ಧ ನಾನು ಯಾವುದೇ ರೆಗ್ಯುಲರ್ ಅಪೀಲನ್ನು ಮಾಡಿಲ್ಲ, ಹೀಗಾಗಿ ನನ್ನ ತಕರಾರಿನಲ್ಲಿ ಹೇಳಿದ ಅಂತಗಳು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಂಗತಿಗಳಿಂದ ಕೂಡಿದ ಪ್ರಮಾಣ ಪತ್ರ ಸಲ್ಲಿಷಿ ಸುಳ್ಳು ಸಾಕಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.